**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ5 , ಪಿ.ಡಬ್ಲ್ಯೂಃ 5**

| | | |
|---|---|---|
| ಸಾಕ್ಷಿದಾರರ ಹೆಸರು | : | ಸರಸ್ವತಿ |
| ತಂದೆಯ ಹೆಸರು | : | ಸುರ್ಯಕಾಂತ್ ದೇವಾಡಿಗ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಶಾಲೆಯಲ್ಲಿ ಅಡುಗೆ ಕೆಲಸ |
| ವಾಸ್ತವ್ಯ | : | ಕಡಸಲ ಗದ್ದೆ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19/08/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಸದರಿ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಕಡಸಲಗದ್ದೆ ಶಾಲೆಯಲ್ಲಿ ಅಡುಗೆ ಮಾಡುತ್ತಾ ಇದ್ದೇನು. ಸದರಿ ಪ್ರಕರಣದ ದಿನಾಂಕ ಸಹ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 06.12.2021ರಂದು ಸೋಮವಾರ ಬೆಳಿಗ್ಗೆ ನಾವು ಶಾಲೆಗೆ ಬಂದಾಗ ಹಿಂದಿನ ದಿನ ದಿಃ 05.12.2021ರಂದು ಶಾಲೆಯ ಆವರಣದಲ್ಲಿರುವ ದೊಡ್ಡ ದೊಡ್ಡ ಆಲದ ಮರಗಳನ್ನು ಕಡಿದಿದ್ದು ಅದನ್ನು ಮೇಲಾಧಿಕಾರಿಗಳ ಗಮನಕ್ಕೆ ಚಾಸಾ 1 ಇವರು ತಂದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ದಿಃ 08.12.2022 ರಂದು ಬೆಳಿಗ್ಗೆ 9.00 ಗಂಟೆ ಸಮಯಕ್ಕೆ ನಾನು ಅಡುಗೆ ಮಾಡುತ್ತಿದ್ದಾಗ ಮದ್ಯಾಹ್ನ 12.00 ಗಂಟೆ ಸಮಯಕ್ಕೆ ಶಾಲೆಯ ಆವರಣದಲ್ಲಿ ಈ ಪ್ರಕರಣದ ಆರೋಪಿತರು ಜೋರಾಗಿ ಕೂಗಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ 4 ಮತ್ತು 5ರವರು ಶಾಲೆಯ ಶಿಕ್ಷಕಿಯರಿಗೆ ಮಕ್ಕಳಿಗೆ ಪಾಠ ಮಾಡದಂತೆ ತಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋತರು ಎಲ್ಲರೂ ಅವಾಚ್ಯವಾಗಿ ಶಾಲೆಯ ಶಿಕ್ಷಕ ಶಿಕ್ಷಕಿಯರಿಗೆ ಅವಾಚ್ಯವಾಗಿ ಬೈದು, ಕ್ಷೇತ್ರ ಶಿಕ್ಷಾಣಾಧಿಕಾರಿ ಮತ್ತು ಎಸ್ ಡಿ ಎಮ್ ಸಿ ಅಧ್ಯಕ್ಷರಿಗೆ ದೂರು ನೀಡಿ ನಾವು ನೋಡಿಕೊಳ್ಳುತ್ತೇವೆ ಎಂದು ಕೂಗಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ 1 ಇವರಿಗೆ 1 ನೇ ಆರೋಪಿಯು

ಏಕವಚನದಲ್ಲಿ ಬೈದು ಅವರ ಎಡಗೈ ಹಿಡಿದು ಎಳೆದಾಡಿ ಅವರನ್ನು ನೆಲಕ್ಕೆ ದೂಡಿಹಾಕಿ ಮಾನಕ್ಕೆ ಕುಂದು ತಂದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ 4 ಇವರು ಚಾಸಾ 1 ರವರಿಗೆ ಭಟ್ಕಳದ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ 3 ನೇ ಆರೋಪಿ ಶಿಕ್ಷಕರನ್ನು ಕುರಿತು ರೂ. 15,000 ಸಂಗ್ರಹ ಮಾಡಿಕೊಡಿ ಹೊಸದಾಗಿ ಶಾಲೆಗೆ ಪಂಪನ್ನು ಹಾಕಿಸುತ್ತೇವೆ ಎಂದರೆ ಸರಿಯಲ್ಲ. ದಿಃ 04.01.2022 ರಂದು ನಾನು ಮತ್ತು ಚಾಸಾ 2 ಶಾಲೆ ಮುಗಿಸಿ ಬರುವಾಗ ಚಾಸಾ 1 ಇವರಿಗೆ ಸದರಿ ಪ್ರಕರಣದ 1 ನೇ ಆರೋಪಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ನಾನು ಸದರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲವೆಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**